ದಿಟವಿರಬಹುದೆ!?

ಶ್ರೀರಾಮೇಗೌಡರು ಮುಂದೆ ನಡೆದಂತೆ ಕಡ್ಡಿಕಸವೇ ಕಾಣತೊಡಗಿದ ಮೇಲೆ ಇನ್ನೇನು ಕುತೂಹಲ ಉಳಿಯದೆ ಪಕ್ಕದಲ್ಲಿದ್ದ ಮತ್ತೊಂದು ಕಲ್ಲುಬೆಂಚಿನ ಮೇಲೆ ಬಂದು ಕೂತರು.

ಆ ಹುಡುಗಿ ಶ್ರೀರಾಮೇಗೌಡರ ಮನಸ್ಸಿನೊಳಗೆ ತಳವೂರತೊಡಗಿದ್ದಳು. ಆ ವಾಸುದೇವಯ್ಯ ತಮ್ಮ ಜೊತೆಗೇ ಇದ್ದರೂ, ತಮ್ಮಂತೆಯೇ ಮಾತಿನಲ್ಲಿ ಮುಳುಗಿರುತ್ತಿದ್ದರೂ ಆ ಹುಡುಗಿಯನ್ನು ಪ್ರತಿದಿನ ಗಮನಿಸಿದ್ದರು. ಅವತ್ತು ತಮ್ಮ ಪ್ಯಾಂಟಿಗಂಟಿಕೊಂಡ ಕಡ್ಡಿಯನ್ನು ಬಿಡಿಸಿಕೊಟ್ಟಾಗಲೇ ತಾವು ಆ ಹುಡುಗಿಯನ್ನು ಗುರುತಿಸಿದ್ದು! ಸ್ನೇಹಿತನಿಗಿದ್ದ ಸೂಕ್ಷ್ಮನಿಗಾ ತನಗಿಲ್ಲವಾಗಿತ್ತಲ್ಲ ಅನಿಸಿ ಬೇಸರಭಾವ ಮೂಡಿತು. ಹಿಂದೊಂದು ದಿನ ಇದೇ ಬೆಂಚಿನ ಮೇಲಿರಬೇಕು. ಅವಳು, ಅವಳನಾಯಿ ಸಾಯೋ ಆಟ ಆಡುತ್ತಿದ್ದದ್ದು. ಅವಳು ಕೈಕಾಲು ಚಾಚಿ, ಕಣ್ಣು ಮುಚ್ಚಿಕೊಂಡು ಸತ್ತಂತೆ ಮಲಗಿದ್ದಳು. ನಾಯಿ ಅತ್ತಿಂದಿತ್ತ ಕುಂಯ್‌ಗುಡುತ್ತ ನೆಗೆದಾಡುತ್ತಿತ್ತು. ಅವಳ ಕೈ ಕಚ್ಚುವುದು, ಅವಳ ಲಂಗ ಎಳೆಯುವುದು, ಅವಳ ಕಾಲು ನೆಕ್ಕುವುದು ಮಾಡುತ್ತಿತ್ತು. ಇವಳು ಅದರ ಆಟಕ್ಕೆ ಉತ್ತೇಜಿತಳಾಗಿ ಸದ್ದಿಲ್ಲದೆ ಸಹಕರಿಸುತ್ತಿದ್ದಳು. ಆಗ ತಾನೇ ವಾಕಿಂಗ್‌ಗೆ ಬಂದಿದ್ದ ತಾವು ಏನೋ ಯಡವಟ್ಟು ಆಗಿರಬಹುದೆಂದು ಗಾಬರಿಯಲ್ಲಿ ಬಂದು ನೋಡಿದರೆ – ಇದು ಅವರಿಬ್ಬರ ವಿನೋದದಾಟ ಅಂತ ತಿಳಿಯಿತು.

ಹುಡುಗಿ ತುಂಬಾ ಚೂಟಿಯಾಗಿದ್ದಳು. ಲಂಗ ಮಾಸಿದ್ದರೂ, ಉದ್ದ ತಲೆಕೂದಲು ನವೆದಿದ್ದರೂ ಯಾವುವೂ ನೋಡುವವರಿಗೆ ತಾಕದಂತೆ ಅವಳ ಕಣ್ಣಿನ ಹೊಳಪು, ನುಡಿಯ ಚುರುಕು, ಸಹಜ ನಡೆಯ ಸಡಗರ, ಕೆಲಸದಲ್ಲಿ ಶ್ರದ್ಧೆ ಇವುಗಳೇ ಎದ್ದು ಕಾಣುತ್ತಿದ್ದವು.

ಶ್ರೀರಾಮೇಗೌಡರು ಒಂದೊಂದು ಹೆಜ್ಜೆ ಮುಂದಿಡುತ್ತಿದ್ದಂತೆಲ್ಲ ಆಗ ಗಣನೆಗೆ ದಕ್ಕಿರದಿದ್ದ ಹುಡುಗಿಯ ಚಲನವಲನ, ನಡೆನುಡಿ, ಆಟ, ಕ್ರಿಯೆಗಳೆಲ್ಲ ಈಗ ಕಣ್ಣ ಪಟಲದಲ್ಲಿ ಭುಗಿಲನೆದ್ದು ಕಾಣುತ್ತಿದ್ದವು. ಹೌದಲ್ಲ – ಅಪರಿಚಿತನ ಪ್ಯಾಂಟಿಗೆ ಸಿಕ್ಕಿಕೊಂಡಿದ್ದ ಕಡ್ಡಿಯನ್ನು ಕೂತು ಬಿಡಿಸುವಂತೆ ಅವಳಿಗೆ ಯಾರು ಹೇಳಿದರು? ನೂರಾರು ಮಂದಿ ಬಳಸುವ ಈ ಹಾದಿಯ ಕಡ್ಡಿಕಸ ತೆಗೆಯುವಂತೆ ಅವಳಿಗೆ ಯಾರು ಹೇಳಿದರು? ತನ್ನ ವಯಸ್ಕರು ಸೇರಿಸದಿದ್ದರೂ ಅವರಾಡುವ ಆಟವನ್ನು ನೋಡಿ ಆನಂದಿಸುವ ಗುಣ ಅವಳಿಗೆ ಯಾರು ಕಲಿಸಿದರು? ಮಕ್ಕಳಾಡುವ ಚೆಂಡು ಬೇಲಿಸಂದಿಯೊಳಗೆ ಸಿಕ್ಕಿಕೊಂಡಾಗ ಅದನ್ನು ಕೈತೂರಿ ತೆಗೆದು ಕೊಡು ಅಂತ ಅವಳಿಗೆ ಯಾರು ಕೇಳಿಕೊಂಡಿದ್ದರು?

ಶ್ರೀರಾಮೇಗೌಡರು ತಮಗರಿವಿಲ್ಲದಂತೆಯೇ ತಲೆತಗ್ಗಿಸಿದರು. ಹುಡುಗಿ ತನ್ನ ನಾಗರಿಕತೆಯ ಹೊದಪನ್ನೇ ಕಳಚಿ ಪ್ರಶ್ನೆ ಮಾಡುತ್ತಿದ್ದಾಳೆ ಅನಿಸಿತು. ಈಗ ಇದ್ದಕ್ಕಿದ್ದಂತೆ ಆ ಹುಡುಗಿಯ ಒಮ್ಮೆ ನೋಡಬೇಕು, ಮಾತನಾಡಿಸಬೇಕು ಅನಿಸಿತು. ಎದ್ದರು. ಫುಟ್‌ಪಾತಿನ ಕಡ್ಡಿಕಸಗಳು ತನ್ನಂತೆಯೇ ಆ ಅನಾಮಧೇಯ ಹುಡುಗಿಗಾಗಿ ಕಾಯುತ್ತಿವೆ ಅಂದುಕೊಳ್ಳುತ್ತ ಪಾರ್ಕಿನಿಂದ ಹೊರಬಂದರು. ಪಾರ್ಕಿನಂಚಿನಲ್ಲೇ ಮೂರು ಅಂತಸ್ತಿನ ಬಂಗಲೆ ತಲೆ ಎತ್ತುತ್ತಿತ್ತು. ಅದರ ಕಂಕುಳದಲ್ಲಿ ಬಂಗಲೆಯ ಕಾವಲುಗಾರನ ಗುಡಿಸಲು. ಆ ಹುಡುಗಿ

